# ಪ್ರತಿ ಪಾತ್ರದಲ್ಲೂ ಹೊಸತನ ಹುಡುಕುವೆ



**ಅಮೂಲ್ಯ**
ಕಲರ್ಸ್ ಕನ್ನಡ 'ಗೌರಿ'ಯ ನಾಯಕಿ

◆ **ನೀವು ನಟಿಯಾಗಿದ್ದು ಹೇಗೆ?**

ಹೆಸರು ಅಮೂಲ್ಯ. ಮೈಸೂರು ಮೂಲ. ಕಂಪ್ಯೂಟರ್ ಸೈನ್ಸ್‌ನಲ್ಲಿ ಡಿಪ್ಲೊಮಾ ಓದಿ, ಈಗ ನಟಿಯಾಗಿದ್ದೇನೆ. ಹಾಗೆಂದು ಆಸಕ್ತಿಯಿಂದಲೇ ಆಗಿದ್ದೇನೆ ಅಂತ ಅಲ್ಲ. ಈ ಕ್ಷೇತ್ರಕ್ಕೆ ಬರುತ್ತೇನೆ ಎನ್ನುವುದೂ ಗೊತ್ತಿರಲಿಲ್ಲ. ಝೀ ಕನ್ನಡದಲ್ಲಿ 'ಯಾರಿಗುಂಟು ಯಾರಿಗಿಲ್ಲ' ಕಾರ್ಯಕ್ರಮ ಬರ್ತಾ ಇತ್ತು. ಅದರಲ್ಲಿ ಭಾಗವಹಿಸುವ ಸಂಬಂಧ ಪರಿಚಯಸ್ಥರ ಜೊತೆ ಹೋಗಿದ್ದೆ. ಅಲ್ಲೊಬ್ಬರು ಮಾತನಾಡಿಸಿ ಅಭಿನಯಿಸುವ ಬಗ್ಗೆ ಕೇಳಿದರು. ಅದಾಗಿಯೇ ಬಂದ ಅವಕಾಶವನ್ನು ಬೇಡ ಎನ್ನಬಾರದು ಎಂದು ಮಾಡಲು ಮುಂದಾದೆ. ಅದರ ಪರಿಣಾಮ ಉದಯದ 'ಅನುರಾಗ ಸಂಗಮ'ದಲ್ಲಿ ನಟಿಸುವ ಸನ್ನಿವೇಶ ಬಂತು. ಅದರಲ್ಲಿ ಶ್ರೀನಾಥ್ ಅವರ ಮಗಳಾಗಿ ಪಾತ್ರ ಮಾಡಿದೆ.

◆ **ಮೊದಲ ಬಾರಿ ಬಣ್ಣ ಹಚ್ಚಿದಾಗ ಹೇಗಿತ್ತು?**

ಖಂಡಿತ ಭಯ ಇರಲಿಲ್ಲ. ಮೊದಲ ಶಾಟ್‌ನಲ್ಲಿ ಗಲಿಬಿಲಿ ಆಗ್ತಾ ಇತ್ತು. ನನ್ನದೇ ಮೊದಲ ಶಾಟ್. ಅದೂ ತುಂಬ ದೀರ್ಘವಾಗಿತ್ತು. ಮನೆಯಲ್ಲಿ ಓಡಾಡಿಕೊಂಡು ಅಪ್ಪನನ್ನು ಮಾತನಾಡಿಸುವ ಸನ್ನಿವೇಶ. ನಟನೆಯ ಗಂಧಗಾಳಿ ಗೊತ್ತಿರಲಿಲ್ಲ. ಏನೇ ಮಾಡಿದರೂ ಶಾಟ್ ಪೂರ್ಣ ಮಾಡಲು ನನಗೆ ಸಾಧ್ಯ ಆಗುತ್ತಿಲ್ಲ. ಮುಂದಿನ ಸನ್ನಿವೇಶಕ್ಕೆ ಹಿರಿಯ ನಟರೆಲ್ಲ ಕಾಯುತ್ತಿದ್ದಾರೆ. ಸಹಜವಾಗಿ ಬರ್ತಾ ಇಲ್ಲ ಎಂದು ನಿರ್ದೇಶಕರು ಕಟ್ ಎಂದು ಹೇಳುತ್ತಲೇ ಇದ್ದಾರೆ. ಮೇಲಿನ ಮಹಡಿಯಿಂದ ಕೆಳಗೆ ಇಳಿಯುವ ದೃಶ್ಯ. ನಡೆದು ಬರುತ್ತಿದ್ದ ಹಾಗೆ ಡೈಲಾಗ್ ಮರೆತು ಹೋಗುತ್ತಿತ್ತು. ಆ ಸಂದರ್ಭದ ಒತ್ತಡ ತಡೆಯಲಾಗದೆ ಅಳಲು ಶುರುಮಾಡಿದೆ. ಶ್ರೀನಾಥ್ ಅವರು ಕರೆದು, 'ಹಾಗೆ ಅಳಬಾರದು. ಮೊದಲ ಬಾರಿ ಹೀಗೆ ಆಗುವುದು ಸಹಜ. ನಂತರ ಎಲ್ಲ ಸರಿಯಾಗುತ್ತದೆ' ಎಂದು ಸಮಾಧಾನ ಮಾಡಿ ಹುರಿದುಂಬಿಸಿದರು. ಆ ಸನ್ನಿವೇಶ ನನ್ನ ವೃತ್ತಿ ಜೀವನದ ಮಹತ್ವದ ಗಳಿಗೆ, ಅದು ಈಗಲೂ ನೆನಪಿದೆ.

ಒಂದು ರೀತಿಯಲ್ಲಿ ನನ್ನ ವೃತ್ತಿ ಬದುಕಿನಲ್ಲಿ ಅದೃಷ್ಟವಂತೆ ಎಂದೇ ಹೇಳಬೇಕು. ಕಷ್ಟ ಅಂತ ನನಗೆ ಯಾವತ್ತೂ ಅನ್ನಿಸಿಲ್ಲ. 'ಸ್ವಾತಿ ಮುತ್ತು' ಧಾರಾವಾಹಿಯಲ್ಲಿ ಸಹಜವಾಗಿ ಕಾಣಿಸಿಕೊಳ್ಳುತ್ತಿದ್ದೆ. 'ಅರಮನೆ' ಮಾಡುವ ತನಕ ನಾನು ಅಭಿನಯಿಸುತ್ತಿದ್ದೇನೆ ಎಂದು ಅನ್ನಿಸಲೇ ಇಲ್ಲ. ನನಗೆ ಗೊತ್ತಾಗದ ಹಾಗೆಯೇ ನಟನೆಯನ್ನು ಕಲಿತಿದ್ದೇನೆ.

◆ **ಗೌರಿ ಪಾತ್ರ ನಿಮಗೆ ಹೇಗೆನಿಸುತ್ತದೆ?**

ಈ ಹಿಂದೆ 'ಕಮಲಿ'ಯಲ್ಲಿ ತುಂಬ ಮೃದು ಸ್ವಭಾವದ ಪಾತ್ರವನ್ನು ಮಾಡಿದ್ದೆ. ಈ ಪಾತ್ರ ಹಾಗಿಲ್ಲ. ಇವಳೂ ಹಳ್ಳಿ ಹುಡುಗಿ ಆದರೆ, ಯಾವಾಗಲೂ ತುಂಬ ಸಂತೋಷದಿಂದ ಇರುತ್ತಾಳೆ. ಎಷ್ಟೇ ನೋವಿದ್ದರೂ ಬೇರೆಯವರಿಗೆ ತೋರಿಸಿಕೊಳ್ಳುವುದಿಲ್ಲ. ಈ ಪಾತ್ರ ನಿರ್ವಹಿಸಲು ಖುಷಿ ಎನಿಸುತ್ತದೆ.

ಕಮಲಿ ಲುಕ್ ಕೂಡ ಭಿನ್ನ, ಇನ್ನೂ ಓದುತ್ತಿರುತ್ತಾಳೆ. ಎರಡು ಜಡೆ, ಲಂಗ ದಾವಣಿಯಲ್ಲಿ ಕಾಣಿಸಿಕೊಳ್ಳುತ್ತಾಳೆ. ಧೈರ್ಯ ಇದ್ದರೂ ಆಕೆಯ ಮುಗ್ಧತೆ ಮೇಲುಗೈ ಸಾಧಿಸುತ್ತದೆ. ಗೌರಿ ಹಳ್ಳಿಯಿಂದ ಬಂದಿದ್ದರೂ ತುಂಬ ಚೆನ್ನಾಗಿ ಓದಿದ್ದಾಳೆ. ಮುಗ್ಧತೆ ಇದ್ದರೂ ಅದು ಕಾಣಿಸುವುದಿಲ್ಲ. ಸಮಸ್ಯೆಗಳನ್ನು ಎದುರಿಸುವ ಚಾಣಾಕ್ಷತೆ ಇರುತ್ತದೆ.

◆ **ನಟಿಯಾಗಿ ಏಕತಾನತೆ ಅನಿಸಿ ಬೋರ್ ಅನ್ನಿಸಿದ್ದು ಇದೆಯಾ?**

ವೀಕ್ಷಕರಿಗೆ ಮಾತ್ರ ಅಲ್ಲ, ಒಬ್ಬ ನಟಿಯಾಗಿ ನನಗೂ ಅನೇಕ ಸಾರಿ ಹಾಗೆ ಅನ್ನಿಸಿದ್ದು ಇದೆ. ಅದುವೇ ಸವಾಲು ಎಂದೂ ಅನಿಸಿದೆ. ತುಂಬ ದೀರ್ಘ ಕಾಲ ಒಂದೇ ಪಾತ್ರವನ್ನು ಮಾಡುತ್ತೇವೆ. ಇತ್ತೀಚಿನ ಮೆಗಾ ಧಾರಾವಾಹಿಗಳು ನಾಲ್ಕು ವರ್ಷ ಬರುತ್ತವೆ. ಅದನ್ನೇ ಮಾಡುತ್ತಿದ್ದೇನಲ್ಲ ಅನ್ನಿಸುತ್ತದೆ. ಕೆಲವು ಸೀನ್ ಹೊಸತು ಅನ್ನಿಸಬಹುದು. ಮತ್ತೆ ಕೆಲವೊಂದು ಪುನರಾವರ್ತನೆ ಅನಿಸುತ್ತವೆ. ನಟಿಯಾಗಿ ಅದನ್ನು ಸವಾಲಾಗಿ ತೆಗೆದುಕೊಳ್ಳಬೇಕು. ಪುನರಾವರ್ತಿತ ದೃಶ್ಯವನ್ನೇ ಬೇರೆ ರೀತಿಯಲ್ಲಿ ನೀಡಬೇಕು ಎಂದು ಸಿದ್ಧಳಾಗುತ್ತೇನೆ.

◆ **ಸಿನಿಮಾಕ್ಕೇಕೆ ಹಿಂದೇಟು?**

ಸಿನಿಮಾ ಮತ್ತು ಸೀರಿಯಲ್ ಎನ್ನುವ ವ್ಯತ್ಯಾಸ ನನಗಿಲ್ಲ. ನಟನೆ ವಿಷಯದಲ್ಲಿ ಎರಡೂ ಒಂದೇ, ಎರಡೂ ಇಷ್ಟ. ಎರಡೂ ಕಡೆ ಅದನ್ನೇ ಮಾಡುವುದು. ನನಗೂ ಅವಕಾಶಗಳು ಬಂದಿವೆ. ಆದರೆ ಮಾಡಲು ಸಾಧ್ಯ ಆಗಿಲ್ಲ. ನನಗೆ ಇಷ್ಟ ಇರುವ ಪಾತ್ರ ಸಿಕ್ಕಾಗ ಬೇರೆ ಕಡೆ ಬಿಜಿ ಇದ್ದೆ. ಬಿಡುವಿನ ವೇಳೆ ಬಂದ ಪಾತ್ರ ಇಷ್ಟ ಆಗಿಲ್ಲ. ಮುಂದೆ ಅಲ್ಲೂ ನನ್ನ ಇಷ್ಟದ ಪಾತ್ರವನ್ನು ಮಾಡುತ್ತೇನೆ.

◆ **ಪಾತ್ರದ ಆಯ್ಕೆಯ ಮಾನದಂಡ ಏನು?**

ಪಾತ್ರ ಹೇಗಿದೆ, ನನ್ನ ಪಾತ್ರಕ್ಕೆ ಅದರಲ್ಲಿ ಎಷ್ಟು ಮಹತ್ವ ಇದೆ ಎನ್ನುವುದಕ್ಕಿಂತ, ಈತನಕ ನಾನು ಮಾಡಿದ ಪಾತ್ರಕ್ಕಿಂತ ಎಷ್ಟು ಭಿನ್ನ ಎನ್ನುವುದು ಮುಖ್ಯ ಆಗುತ್ತದೆ. ಅದರಲ್ಲಿ ಏನು ಕಲಿಯಬಹುದು, ಬೇರೆ ರೀತಿಯಲ್ಲಿ ಅಭಿನಯಿಸಲು ಸಾಧ್ಯವೇ? ಸಿನಿಮಾ ಆಗಲಿ ಧಾರಾವಾಹಿ ಆಗಲಿ ಅಭಿನಯಕ್ಕೆ ಮಹತ್ವ ಇರಬೇಕು. ನನಗೆ ಬೆದರುಗೊಂಬೆಯಂತೆ ಕಾಣಿಸಿಕೊಳ್ಳುವುದು ಇಷ್ಟ ಇಲ್ಲ.

■ **ರಾಘವೇಂದ್ರ ಕೆ.**